ಬಾದಾಮಿ ತಾಲ್ಲೂಕಿನಲ್ಲಿ ಜಮೀನಿನ ಲೀಜ್ ವಿಚಾರ

೩೩೨ (೬೪೦) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಣ್ಣ ಪ್ರಮಾಣದ ಉದ್ಯಮಗಳು, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ: —

ಅ) ಎಸ್. ಎಸ್. ನರಸಣಗಿ ಎಂಬುವರಿಗೆ ಬಾದಾಮಿ ತಾಲ್ಲೂಕಿನಲ್ಲಿ ಗುತ್ತಿಗೆಯ, ಆಧಾರದ ಮೇಲೆ ಜಮೀನು ಮಂಜೂರು ಮಾಡಿದ್ದು ನಿಜವೇ ?

ಆ) ಆ ರೀತಿ ಅವರಿಗೆ ಮಂಜೂರು ಮಾಡಲಾದ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು ?

ಇ) ಜಮೀನಿನ ಒಡೆಯರಿಗೆ ತಿಳಿಯದಂತೆ ಲೀಜ್ ಮಾಡಿರುವುದು ನಿಜವೇ ?

ಈ) ಈ ರೀತಿ ಲೀಜ್ ಕೊಡುವಾಗ ಇರುವ ಸಾಮಾನ್ಯ ನಿಯಮಗಳೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಕೈಗಾರಿಕೆ ಮತ್ತು ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಇಲ್ಲ. ಎಸ್. ಎಸ್. ನರಸಣಗಿಯವರಿಗೆ ೧೯೮೨ರಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಿರುವುದು ನಿಜ.

ಆ) ೨೫೦ ಎಕರೆ.

ಇ) ೧೯೮೧–೮೨ರಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಜಿಲ್ಲಾಧಿಕಾರಿಗಳ ಒಪ್ಪಿಗೆ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗಿದೆ. ಆಗ ಚಾಲ್ತಿಯಲ್ಲಿದ್ದ ನಿಯಮಗಳ ಪ್ರಕಾರ ಗಣಿ ಗುತ್ತಿಗೆ ಮಂಜೂರು ಮಾಡಲು ಜಮೀನುದಾರರ ಪೂರ್ವಾನುಮತಿ ಬೇಕಾಗಿರಲಿಲ್ಲ.

ಈ) ಖನಿಜ ರಿಯಾಯಿತಿ ನಿಯಮ ೧೯೬೦ ಮತ್ತು ಎಂ. ಎಂ. (ಆರ್ ಅಂಡ್ ಡಿ) ಆಕ್ಟ್ ೧೯೫೭ರ ನಿಯಮಗಳನ್ನಾಧರಿಸಿ.

ಚಕ್ರ ಆಣೆಕಟ್ಟಿಗೆ ತಗುಲಿದ ವೆಚ್ಚ

೩೩೪ (೬೩೪) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಿಸಿರುವ ಚಕ್ರಾ ಆಣೆಕಟ್ಟಿಗೆ ತಗುಲಿದ ವೆಚ್ಚವೆಷ್ಟು ?

ಆ) ಚಕ್ರಾ ಆಣೆಕಟ್ಟು ಬಿರುಕು ಬಿಟ್ಟಿರುವುದು ನಿಜವೇ ?

ಇ) ಬಿರುಕು ಬಿಟ್ಟಿದ್ದರೆ, ಇದಕ್ಕೆ ಸಂಬಂಧಪಟ್ಟವರ ಮೇಲೆ ಕೈಗೊಂಡ ಕ್ರಮವೇನು ?

ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಚಕ್ರಾ ಆಣೆಕಟ್ಟಿಗೆ ತಗುಲಿದ ವೆಚ್ಚ ೧೭.೩೦ ಕೋಟಿ ರೂ. ಗಳು

ಆ) ಆಣೆಕಟ್ಟು ಬಿರುಕು ಬಿಟ್ಟಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಸರಬರಾಜು ಬಗ್ಗೆ

೩೩೫ (೬೩೭) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಆ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಎಷ್ಟು ?

ಅ) ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲವೆಂದು ಹೇಳಿಕೆ ನೀಡಿರುವುದು ನಿಜವೆ ?

ಇ) ಹಾಗಿದ್ದಲ್ಲಿ ದಿನವಿಡೀ ಹಗಲೂ ರಾತ್ರಿ ಎನ್ನದೆ ವಿದ್ಯುತ್ ನಿಲುಗಡೆ ಮಾಡುತ್ತಿರುವುದು ನಿಜವೆ ?

ಈ) ಇಂತಹ ಪರಿಸ್ಥಿತಿಗೆ ಕಾರಣವೇನು ?

ಉ) ಇದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೮-೮೯ನೇ ಸಾಲಿನಲ್ಲಿ ಅಂತರಿಕ ಉತ್ಪಾದನೆಯಿಂದ ಸುಮಾರು ೯೩೧೦ ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ (ಪೂರ್ಣ ಉತ್ಪಾದನೆ)

ಆ) ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ.

ಇ) ನಿಯಮಿತ ವೇಳೆಗಳಲ್ಲಿ ಲೋಡ್ ಷೆಡ್ಡಿಂಗ್ ಜಾರಿಗೆ ತರಲಾಗಿದೆ.

ಈ) ರಾಜ್ಯದಲ್ಲಿ ಜಾರಿಯಲ್ಲಿದ್ದ ವಿದ್ಯುತ್ ಬಳಕೆ ಮೇಲಿನ ಕಡಿತದ ಪ್ರಮಾಣವನ್ನು ಕೆಲವು ವರ್ಗದ ಗ್ರಾಹಕರಿಗೆ ಕಡಿಮೆ ಮಾಡಲಾಗಿತ್ತು, ಕೆಲವು ವರ್ಗದ ಗ್ರಾಹಕರಿಗೆ ಇದರಿಂದ ಪೂರ್ಣ ವಿನಾಯಿತಿ ನೀಡಲಾಯಿತು, ಇದರಿಂದಾಗಿ ವಿದ್ಯುತ್‌ನ ಬೇಡಿಕೆ ಲಭ್ಯವಿರುವ ಪ್ರಮಾಣಕ್ಕಿಂತ ಅಧಿಕವಾಗಿ ಸ್ಪೇಷನ್ನುಗಳು ಓವರ್ ಲೋಡ್ ಆದವು ಜೊತೆಗೂ ಪೀಲ್ಟೇಜಿನಲ್ಲಿ ಕುಸಿತ ಉಂಟಾಯಿತು. (ಪೀಕ್‌ಲೋಡ್ ವೇಳೆಗಳಲ್ಲಿ) ರಾಜ್ಯದ ನಿರಾವರಿ ಪಂಪುಸೆಟ್ಟುಗಳ ವಿದ್ಯುತ್ ಬೇಡಿಕೆ ಏರುತ್ತಾ ಹೋಗಿದೆ ಆದ್ದರಿಂದ ಪರಿಸ್ಥಿತಿ ಸಾಧ್ಯವಾದ ಮಟ್ಟಿಗೂ ಸುಧಾರಿಸಲು ನಿಯಮಿತ ವೇಳೆಗಳಲ್ಲಿ ಲೋಡ್ ಷೆಡ್ಡಿಂಗ್ ಜಾರಿಗೆ ತರಲಾಯಿತು.

ಉ) ವಿದ್ಯುತ್ತಿನ ಪರಿಸ್ಥಿತಿ ಸುಧಾರಿಸಲು ಅನೇಕ ಕ್ರಮ ಕೈಗೊಳ್ಳಲಾಗುತ್ತಿದೆ. ಪರಿಸ್ಥಿತಿ ಸುಧಾರಿಸುವವರೆಗೂ ಹಾಗು ಯಾವಾಗ ಅನಿವಾರ್ಯವಾಗಿ ಕಂಡು ಬರುತ್ತದೋ ಆಗಾಗಲೆಲ್ಲಾ ಲೋಡ್ ಷೆಡ್ಡಿಂಗ್ ಅನಿವಾರ್ಯ.

ರಾಜ್ಯ ಸರ್ಕಾರ ಕೈಗಾರಿಕಾ ಕಾಖಾನೆಗಳಿಗೆ ಉದ್ಯೋಗಿಗಳನ್ನು ನೇಮಿಸುವ ವಿಚಾರ

೩೩೫ (೬೨೬) ಶ್ರೀ ಬಿ. ರಾಮದಾಸ್ (ಹೊಸದುರ್ಗ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಗಣಿ, ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ವಿಧಾನವು ಸರ್ಕಾರದ ಆಲೋಚನೆಯಲ್ಲಿದೆಯೇ ?

ಆ) ರಾಜ್ಯದಲ್ಲಿ ಸ್ಥಾಪನೆಯಾಗುತ್ತಿರುವ ಹೊಸ ಹೊಸ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗವನ್ನು ಕೊಡಲು ಆಲೋಚಿಸಿದೆಯೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಇದೆ.

ಆ) ರಾಜ್ಯದಲ್ಲಿ ಸ್ಥಾಪನೆಯಾಗುವ ಹೊಸ ಕೈಗಾರಿಗಳು ಸ್ಥಳೀಯರಿಗೆ ಕನಿಷ್ಟ ಬೇಕಾದ ೮೦ ಹುದ್ದೆಗಳನ್ನು ನೀಡಬೇಕೆಂದು ಸರ್ಕಾರಿ ಆದೇಶ ಸಂಖ್ಯೆ ಪಿ. ಐ ೧೪೬ ಎಸ್. ಪಿ. ಸಿ. ೮೮, ದಿನಾಂಕ ೫-೧೨-೮೮ರಲ್ಲಿ ನಿರ್ದೇಶನ ನೀಡಲಾಗಿದೆ. ಅಂತಹ ಹೊಸ ಉದ್ದಿಮೆಗಳು ಮಾತ್ರ ಹೊಸ ಪ್ರೋತ್ಸಾಹಧನ ಮತ್ತು ರಿಯಾಯಿತಿಗೆ ಅರ್ಹವಾಗಿರುತ್ತವೆ.